**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ನ್ಯಾಯಾಲಯ,**

**ತಿ.ನರಸೀಪುರ**

# ಸಿ.ಸಿ.ನಂ. 427/2018

**ಪಿರ್ಯಾದುದಾರರು** : ಬನ್ನೂರು ಪೊಲೀಸ್ ಆರಕ್ಷಕರು

**ವಿರುದ್ಧ**

**ಆರೋಪಿ** : 1. ಸಿದ್ದರಾಜು @ ಮನು

2. ಉಮೇಶ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ರೀತ್ಯಾ ಆರೋಪಿ ರವರ ಹೇಳಿಕೆ**

ಪ್ರಶ್ನೆಃ 1 ನೀವು ಈ ಪ್ರಕರಣದಲ್ಲಿ ವಿಚಾರಣೆಯಾಗಿರುವ ಸಾಕ್ಷಿಗಳ ಸಾಕ್ಷಗಳನ್ನು ಕೇಳಿದ್ದೀರಾ?

ಉತ್ತರಃ 1 ನೇ ಆರೋಪಿಃ

2 ನೇ ಆರೋಪಿಃ

ಪ್ರಶ್ನೆಃ 2 ಫ್ರಾಸಾ.1 - ಲತೇಶ್ ಕುಮಾರ್ ಡಿ.ಕೆ. ರವರು ತಮ್ಮ ಸಾಕ್ಷ್ಯದಲ್ಲಿ ದಿಃ 25.01.2018 ರಂದು ಶ್ರೀವಡ್ಗಲರಂಗನಾಥ ಸ್ವಾಮಿ ದೇವಸ್ಥಾನದ ಬೆಟ್ಟದ ಬಂದೋಬಸ್ತು ಕಾರ್ಯ ನಿರ್ವಹಿಸಿ ದಿಃ 26.01.2018 ರಂದು ಬೆಳಿಗಿನ ಜಾವ 1.45 ಕ್ಕೆ ಬನ್ನೂರು ಪಟ್ಟಣದ ಚಾಮುಂಡೇಶ್ವರಿ ಸ್ಕೂಟರ್ ವರ್ಕ್ಸ್ ನ ಅಂಗಡಿಯ ಮುಂದೆ ಇಬ್ಬರು ಆಸಾಮಿಗಳನ್ನು ತಮ್ಮ ಜೀಪನ್ನು ನೋಡಿ ಅವರ ಇರುವಿಕೆಯನ್ನು ಮರೆಮಾಚಲು ಪ್ರಯತ್ನಿಸಿದಾಗ ಜೀಪನ್ನು ನಿಲ್ಲಿಸಿ ತಾನು ಮತ್ತು ತನ್ನ ಜೀಪಿನ ಚಾಲಕನಾದ ಚಾಸಾ-4 ರವರು ಆಸಾಮಿಗಳನ್ನು ಹಿಡಿದು ವಿಚಾರಿಸಲಾಗಿ, ಅವರುಗಳು 1 ಮತ್ತು 2 ನೇ ಆರೋಪಿಗಳಾದ ನೀವಾಗಿದ್ದು ಹಾಗೂ ನೀವಿಬ್ಬರೂ ಸಹ ಸಿದ್ದನಹುಂಡಿ ಗ್ರಾಮದವರಾಗಿರುವುದಾಗಿ ನುಡಿದಿದ್ದು, ನಂತರ ಚಾಸಾ-4 ರವರ ಸಹಾಯದಿಂದ ಪಂಚರ ಸಮಕ್ಷಮ ನಿಮ್ಮ ಅಂಗಶೋಧನೆ ಮಾಡಲಾಗಿ, 1 ನೇ ಆರೋಪಿಯಾದ ನೀವು ಧರಿಸಿದ್ದ ಪ್ಯಾಂಟಿನ ಹಿಂಬಧಿಯಲ್ಲಿ ಎಂ.ಓ-1 ಆದ ½ ಅಡಿ

ಉದ್ದದ 1 ಕಬ್ಬಿಣದ ರಾಡು ಸಿಕ್ಕಿದ್ದು, ಅದನ್ನು ಪಂಚರಾದ ಚಾಸಾ–2 ಮತ್ತು ಚಾಸಾ–3 ರವರ ಸಮಕ್ಷಮ ಬೆಳಗಿನ ಜಾವ 2 ರಿಂದ 2.30 ಗಂಟೆಯವರೆಗೆ ನಿ.ಪಿ.2 ರಂತೆ ಪಂಚನಾಮೆ ಮಾಡಿ ಜಪ್ತುಪಡಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನಿವೇನು ಹೇಳುವಿರಿ?

ಉತ್ತರಃ 1 ನೇ ಆರೋಪಿಃ

2 ನೇ ಆರೋಪಿಃ

ಪ್ರಶ್ನೆಃ 3 ಮುಂದುವರೆದು, ಇದೇ ಸಾಕ್ಷಿಯು ತಮ್ಮ ಸಾಕ್ಷ್ಯದಲ್ಲಿ, 1 ಮತ್ತು 2 ನೇ ಆರೋಪಿಗಳಾದ ನಿಮ್ಮನ್ನು ಠಾಣೆಗೆ ಕರೆತಂದು ನಿ.ಪಿ.1 ರಂತೆ ಸ್ವ–ವರದಿಯನ್ನು ತಯಾರಿಸಿ ಬೆಳಗಿನ ಜಾವ 3 ಗಂಟೆ ಸಮಯದಲ್ಲಿ ನಿಮ್ಮ ವಿರುದ್ಧ ಠಾಣಾ ಗುನ್ನೆ ಸಂ. 21/2018 ರಡಿಯಲ್ಲಿ ನಿ.ಪಿ.3 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸಿರುವುದಾಗಿ ನುಡಿದಿದ್ದು, ನಂತರ ನಿ.ಪಿ.4 ರಂತೆ ಚಾಸಾ–2 ರವರ ಹೇಳಿಕೆಯನ್ನು ಹಾಗೂ ಚಾಸಾ–3 ಮತ್ತು ಚಾಸಾ–4 ರವರ ಹೇಳಿಕೆಗಳನ್ನು ಪಡೆದುಕೊಂಡು ಅದೇ ದಿನ ನಿಮ್ಮ ವೈದ್ಯಕೀಯ ತಪಾಸಣೆ ನಡೆಸಿ, ನ್ಯಾಯಾಲಯಕ್ಕೆ ರಿಮ್ಯಾಂಡ್ ಅರ್ಜಿಯೊಂದಿಗೆ ಹಾಜರುಪಡಿಸಿರುವುದಾಗಿ ನುಡಿದಿದ್ದು, ನಂತರ ತನಿಖೆ ಪೂರ್ಣಗೊಂಡಿದ್ದ ಕಾರಣ ದಿಃ 27.01.2018 ರಂದು ನಿಮ್ಮ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದು ನುಡಿದಿದ್ದು ಹಾಗೂ ಸದರಿ ದಾಖಲೆಗಳನ್ನು ಹಾಗೂ ಅವುಗಳಲ್ಲಿರುವ ತನ್ನ ಸಹಿ ನಿ.ಪಿ.1(ಎ), ನಿ.ಪಿ.2(ಎ), ನಿ.ಪಿ.3(ಎ)ಗಳನ್ನು ಹಾಗೂ ಎಂ.ಓ–1 ನೋಡಿ ಗುರುತಿಸಿರುತ್ತಾರೆ, ಇದಕ್ಕೆ ನಿವೇನು ಹೇಳುವಿರಿ?

ಉತ್ತರಃ 1 ನೇ ಆರೋಪಿಃ

2 ನೇ ಆರೋಪಿಃ

ಪ್ರಶ್ನೆಃ 4 ಫ಼ಾಸಾ.3 – ಪುಟ್ಟಸ್ವಾಮಿ ರವರು ತಮ್ಮ ಸಾಕ್ಷ್ಯದಲ್ಲಿ ತಾನು 1 ಮತ್ತು 2 ನೇ ಆರೋಪಿತರರಾದ ನಿಮ್ಮನ್ನು ನೋಡಿರುವುದಾಗಿ ನುಡಿದಿದ್ದು, ದಿಃ

25.01.2018 ರಂದು ರಾತ್ರಿ 9 ಗಂಟೆ ಸಮಯದಲ್ಲಿ ತಾನು ಹಾಗೂ ಚಾಸಾ-1 ರವರು ತಮ್ಮ ಇಲಾಖಾ ಜೀಪ್ ನಂ. ಕೆಎ-55-ಜಿ-114 ರಲ್ಲಿ ವಡ್ಗಲರಂಗನಾಥ ಸ್ವಾಮಿ ಬೆಟ್ಟಕ್ಕೆ ಬಂದೋಬಸ್ತ್ ಕರ್ತವ್ಯಕ್ಕೆ ಹೋಗಿದ್ದು, ಸದರಿ ಕರ್ತವ್ಯ ಮುಗಿಸಿಕೊಂಡು ಗಸ್ತಿಗಾಗಿ ಮಲಿಯೂರು, ವಡ್ಡರಕೊಪ್ಪಲು ಗ್ರಾಮಗಳಲ್ಲಿ ಗಸ್ತು ಮಾಡಿ, ಬನ್ನೂರು ಪಟ್ಟಣಕ್ಕೆ ಬೆಳಗಿನ ಜಾವ ಅಂದರೆ ದಿಃ 26.01.2018 ರಂದು 1.15 ಗಂಟೆ ಸಮಯಕ್ಕೆ ಬಂದಾಗ ಮೈಸೂರು - ಮಳವಳ್ಳಿ ಮುಖ್ಯ ರಸ್ತೆಯಲ್ಲಿರುವ ಚಾಮುಂಡೇಶ್ವರಿ ಸ್ಕೂಟರ್ ಗ್ಯಾರೇಜ್ ಹತ್ತಿರ 1 ಮತ್ತು 2 ನೇ ಆರೋಪಿಗಳಾದ ನೀವು ಮರೆಮಾಚಿ ನಿಂತುಕೊಂಡಿರುವುದು ಕಂಡುಬಂದಿದ್ದು, ಸಾಕ್ಷಿಯು ನಿಮ್ಮನ್ನು ನೋಡಿ ಸ್ಥಳಕ್ಕೆ ಹೋಗಿ ಚಾಸಾ-1 ರವರು ನಿಮ್ಮನ್ನು ವಿಚಾರಣೆ ಮಾಡಿದ್ದು, ಅನುಮಾನಸ್ಪದವಾಗಿ ಇರುವ ಕಾರಣ ಚಾಸಾ-1 ರವರು ಪಂಚರನ್ನು ಸ್ಥಳಕ್ಕೆ ಬರಮಾಡಿಕೊಂಡು, ಪಂಚರ ಸಮಕ್ಷಮ ನಿಮ್ಮ ಅಂಗಶೋಧನೆ ಮಾಡಿದಾಗ 1 ನೇ ಆರೋಪಿಯಾದ ನೀವು ಧರಿಸಿದ ಪ್ಯಾಂಟಿನ ಹಿಂಭಾಗದಲ್ಲಿ 1½ ಅಡಿ ಉದ್ದದ 1 ಬೆರಳು ಗಾತ್ರದ ಕಬ್ಬಿಣದ ರಾಡು ಕಂಡುಬಂದಿದ್ದು, ಸದರಿ ಕಬ್ಬಿಣದ ರಾಡನ್ನು ಪಂಚರ ಸಮಕ್ಷಮ ಬೆಳಿಗ್ಗೆ 2.00 ರಿಂದ 2.30 ರ ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ, ಕಬ್ಬಿಣದ ರಾಡನ್ನು ಜಪ್ತುಪಡಿಸಿಕೊಂಡಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನಿವೇನು ಹೇಳುವಿರಿ?

ಉತ್ತರಃ 1 ನೇ ಆರೋಪಿಃ

2 ನೇ ಆರೋಪಿಃ

ಪ್ರಶ್ನೆಃ 5 ಮುಂದುವರೆದು, ಇದೇ ಸಾಕ್ಷಿಯು ತಮ್ಮ ಸಾಕ್ಷ್ಯದಲ್ಲಿ ನಂತರ 1 ಮತ್ತು 2 ನೇ ಆರೋಪಿಗಳಾದ ನಿಮ್ಮನ್ನು ಜೀಪಿನಲ್ಲಿ ಠಾಣೆಗೆ ಕರೆದುಕೊಂಡು ಬಂದಿದ್ದು, ನಂತರ ನಿಮ್ಮ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ ಎಂದು ನುಡಿದಿದ್ದು ಹಾಗೂ ಸದರಿ ಕೃತ್ಯದ ಬಾಬ್ತು ಚಾಸಾ-1 ರವರು ತನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ ಎಂದು

ನುಡಿದಿದ್ದು, ಆರೋಪಿತರನ್ನು ಮತ್ತು ಕೃತ್ಯಕ್ಕೆ ಬಳಸಿದ ಎಂ.ಓ-1 ಕಬ್ಬಿಣ ರಾಡನ್ನು ನೋಡಿ ಗುರುತಿಸುತ್ತೇನೆ ಎಂದು ಸಾಕ್ಷ್ಯನುಡಿದಿರುತ್ತಾರೆ, ಇದಕ್ಕೆ ನಿವೇನು ಹೇಳುವಿರಿ?

ಉತ್ತರಃ 1 ನೇ ಆರೋಪಿಃ

2 ನೇ ಆರೋಪಿಃ

ಪ್ರಶ್ನೆಃ 6 ನಿಮಗೆ ಈ ಕೇಸಿನ ಬಗ್ಗೆ ಏನಾದರೂ ಹೇಳುವುದು ಇದೆಯೆ ?

ಉತ್ತರಃ 1 ನೇ ಆರೋಪಿಃ

2 ನೇ ಆರೋಪಿಃ

ಪ್ರಶ್ನೆಃ 7 ನಿಮ್ಮ ಪರ ಸಾಕ್ಷ್ಯ ವಿಚಾರಣೆ ಇದೆಯೆ ?

ಉತ್ತರಃ 1 ನೇ ಆರೋಪಿಃ

2 ನೇ ಆರೋಪಿಃ

(ಆರೋಪಿಗೆ ತಿಳಿಯುವ ಭಾಷೆಯಲ್ಲಿ ಪ್ರಶ್ನಿಸಿ ನಂತರ ಆತನು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲು ಮಾಡಲಾಯಿತು.)

ದಿನಾಂಕಃ 01.07.2026

ಸ್ಥಳಃ ತಿ.ನರಸೀಪುರ.

**ಪ್ರಧಾನ ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.,**
**ತಿ. ನರಸೀಪುರ.**

**ಆರೋಪಿತರ ಸಹಿಃ**